ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.238/2023

ಚಾಸಾ:17 ಪ್ರಾಸಾ:10

ದಿನಾಂಕಃ 16.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಸುನಿಲ್ ಕುಮಾರ್ |
| ತಂದೆಯ ಹೆಸರು– | ಕೃಷ್ಣೇಗೌಡ |
| ವಯಸ್ಸು – | 35 ವರ್ಷ |
| ಉದ್ಯೋಗ– | ಆರಕ್ಷಕ ಉಪನಿರೀಕ್ಷಕರು |
| ವಾಸ– | ಬಾಗೇಪಲ್ಲಿ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು ಏಪ್ರಿಲ್ 2022 ರಿಂದ ಜುಲೈ 2023 ರವರೆಗೆ ಆ್ಯಂಡರ್ ಸನ್ ಪೇಟೆ ಆರಕ್ಷಕ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

2. ದಿನಾಂಕ 18.09.2022 ರಂದು ಸಿ.ಆರ್.91/2022 ಪ್ರಕರಣಕ್ಕೆ ಸಂಬಂಧಿಸಿದ ಆರೋಪಿತರನ್ನು ಪತ್ತೆ ಹಚ್ಚುವ ಸಲುವಾಗಿ ನಮ್ಮ ಸಿಬ್ಬಂದಿಯವರನ್ನು ನೇಮಕ ಮಾಡುತ್ತೇನೆ. ಸದರಿಯವರು ಚಾಂಪಿಯನ್ ರೀಫ್ಸ್ ರೈಲ್ವೆ ನಿಲ್ದಾಣದಲ್ಲಿ ಅನುಮಾನಸ್ಪದವಾಗಿ ದ್ವಿಚಕ್ರ ವಾಹನದಲ್ಲಿ ಓಡಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿ ಠಾಣೆಗೆ ಕರೆದುಕೊಂಡು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿಯವರನ್ನು ನನ್ನ ಮುಂದೆ ಹಾಜರುಪಡಿಸಿದ ಮೇರೆಗೆ ನಾನು ಅವರ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿಯವರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಆರೋಪಿತರು ತಮ್ಮನ್ನು ಕರೆದುಕೊಂಡು ಹೋದರೆ ತಾವು ಕಳ್ಳತನ ಮಾಡಿದಂತಹ ಮನೆಗಳನ್ನು ಕಳ್ಳತನ ಮಾಡಿದಂತಹ ವಸ್ತುಗಳನ್ನು ಬಚ್ಚಿಟ್ಟಿರುವ ಸ್ಥಳ ಮತ್ತು ಕಬ್ಬಿಣದ ರಾಡ್ ನ್ನು ತೋರಿಸುತ್ತೇನೆ ಎಂದು ತಿಳಿಸಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ–17 ಮತ್ತು ನಿಪಿ–18 ಎಂದು ಗುರುತಿಸಲಾಯಿತು.

3. ದಿನಾಂಕ 19.09.2022 ರಂದು ಆರೋಪಿತರು ಆ್ಯಂಡರ್ ಸನ್ ಪೇಟೆಯ ಠಾಣಾ ಮೊಕದ್ದಮೆ ಸಂಖ್ಯೆ 91/2022 ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದು ನಂತರದಲ್ಲಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಮೇರೆಗೆ ತಾನು ಇತರೆ ಪ್ರಕರಣಗಳಲ್ಲಿ ಕಳವು ಮಾಡಿದ ವಸ್ತುಗಳನ್ನು ಆತನ ಹಳೆಯ ಮನೆಯಲ್ಲಿ ಇಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ಹೇಳಿಕೆಯ ಮೇರೆಗೆ ನಾನು 1 ನೇ ಆರೋಪಿ, ಚಾಸಾ–5 ಮತ್ತು 6

ರವರನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇನೆ. ಸದರಿ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಮಹಜರಿ ಕ್ರಮ ಜರುಗಿಸಿ ಸದರಿ ಹಳೆಯ ಮನೆಯಲ್ಲಿ ಇದ್ದಂತಹ ಕಳುವು ಆದ ಒಂದು ಜೊತೆ ಬಂಗಾರದ ಓಲೆ, ಒಂದು ಬಂಗಾರದ ಉಂಗುರ, ಒಂದು ಬಂಗಾರದ ಕತ್ತಿನ ಚೈನು, ಒಂದು ಬಂಗಾರದ ಚೈನು, ಒಂದು ಜೊತೆ ಬಂಗಾರದ ಓಲೆ ಹಾಗೂ 8 ಬೆಳ್ಳಿ ಕಾಲು ಗೆಜ್ಜೆ, ಒಂದು ಬಂಗಾರದ ಮಾಂಗಲ್ಯ ಚೈನು ಮತ್ತು ಕತ್ತಿನ ಚೈನು, ಕಪ್ಪು ಬಣ್ಣದ ಸೋನಿ ಕಂಪನಿಯ ಎಲ್.ಇ.ಡಿ. ಟಿ.ವಿ., ಪ್ರೆಸ್ಟಿಜ್ ಕಂಪನಿಯ ಹೊಸ ಮಿಕ್ಸಿ ಹಾಗೂ ಕಬ್ಬಿಣದ ರಾಡ್ ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡಂತಹ ಠಾಣಾ ಮಾಲು ಪಟ್ಟಿ ಸಂಖ್ಯೆ 101/2022 ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ 19.09.2022 ರಂದು ಚಾಸಾ-13 ರವರಿಗೆ ಅಮಾನತ್ತುಪಡಿಸಿಕೊಂಡಂತಹ ಒಡವೆಗಳ ತೂಕ ಮತ್ತು ಮೌಲ್ಯವನ್ನು ಪರಿಶೀಲಿಸಿ ದೃಡೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ದೃಡೀಕರಣ ಪತ್ರ ಈಗಾಗಲೇ ನಿಪಿ-14 ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು.

4. ನಂತರದಲ್ಲಿ ಸದರಿ ಮಾಲು ಪಟ್ಟಿ ಸಂಖ್ಯೆ 101/2022 ರ ಐಟಂ ನಂ.1 ರಿಂದ 3 107/2022 ಪ್ರಕರಣಕ್ಕೆ ಸಂಬಂಧಿಸಿದ ಮುದ್ದೆ ಮಾಲು ಆಗಿರುವ ಕಾರಣದಿಂದ ಸದರಿ ಮಾಲುಗಳನ್ನು ಮತ್ತು ಪಂಚನಾಮೆಯನ್ನು ದೃಡೀಕರಣಪಡಿಸಿ ದಿನಾಂಕ 23.09.2022 ರಂದು ಚಾಸಾ-18 ರವರಿಗೆ ಹಸ್ತಾಂತರಿಸಿರುತ್ತೇನೆ. ಸದರಿ ಹಸ್ತಾಂತರ ಪತ್ರವನ್ನು ನಿಪಿ-19 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು 1 ನೇ ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಮ್ಮ ಅರ್ಜಿಯಲ್ಲಿ ತಿಳಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

5. 1 ಮತ್ತು 2 ನೇ ಆರೋಪಿಯ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಅವರನ್ನು ನಾನು ಕರೆದುಕೊಂಡು ಹೋದರೆ ಕಳುವು ಮಾಡಿದ ವಸ್ತುಗಳನ್ನು ತೋರಿಸುತ್ತೇನೆ

ಎಂದು ಹೇಳಿರುವುದಿಲ್ಲ ಎಂದರೆ ಸುಳ್ಳು. ನಾವು ಕಳುವು ಮಾಡಿದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಂತಹ ಹಳೆ ಮನೆ 1 ನೇ ಆರೋಪಿಗೆ ಸಂಬಂಧಿಸಿದ ಮನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾವು ಹೋದಂತಹ ಜಾಗದ ಸುತ್ತಾಮುತ್ತಲೂ ಬೇರೆಯವರ ಮನೆಗಳು ಇದ್ದವು ಎಂದರೆ ಸರಿ. ಸದರಿ ಹಳೆ ಮನ ಸುತ್ತಮುತ್ತಲೂ ವಾಸವಾಗಿರುವಂತಹ ವ್ಯಕ್ತಿಗಳು ಅಥವಾ ಹಳೆ ಮನೆಯಲ್ಲಿ ವಾಸವಾಗಿದಂತಹ ವ್ಯಕ್ತಿ ಪಂಚರಾಗಿ ನಿಪಿ-10 ಮಹಜರ್ ಗೆ ಸಹಿ ಮಡಿರುವುದಿಲ್ಲ ಎಂದರೆ ಸರಿ. ನಿಪಿ-10 ಅಮಾನತ್ತು ಮಹಜರ್ ನಾನು ಮಾಡುವ ಸಲುವಾಗಿ ಪೋಟೋವನ್ನು ತೆಗೆದಿರುತ್ತೇನೆ. ಸದರಿ ಪೋಟೋಗೆ ಸಂಬಂಧಿಸಿದಂತೆ ನಾನು ಕಲಂ 65(ಬಿ) ಅಡಿಯಲ್ಲಿ ದೃಡೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಹೇಳಿದ ಹಾಗೆ ನಮ್ಮ ಠಾಣಾ ಸಿಬ್ಬಂದಿಯವರನ್ನು ಆರೋಪಿತರನ್ನು ಪತ್ತೆ ಹಚ್ಚುವ ಸಲುವಾಗಿ ನಾನು ನೇಮಿಸಿರುವುದಿಲ್ಲ ಮತ್ತು ಸದರಿಯವರು ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸುಳ್ಳು. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಮರು ವಿಚಾರಣೆಃ</u>** ಇಲ್ಲ

2 ನೇ ಆರೋಪಿತರ ವಕೀಲರ 1 ನೇ ಆರೋಪಿತರ ವಕೀಲರು ಮಾಡಿದಂತಹ ಪಾಟೀಸವಾಲನ್ನು ಅನುಸರಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್